**ಅಧ್ಯಕ್ಷರು** : ಅದಕ್ಕೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್** : ಮಾನ್ಯ ಅಧ್ಯಕ್ಷರೇ, ಮಾನ್ಯ ವೈಜನಾಥ ಪಾಟೀಲ್‌ರವರು ತಂದಿರತಕ್ಕಂಥ ವಿಷಯ ಏನಿದೆ, ಆ ವಿಷಯದ ಗಂಭೀರತೆ ಮತ್ತು ಮಹತ್ವದ ಬಗ್ಗೆ ನಾವ್ಯಾರೂ ಅಲ್ಲಗಳೆಯಲಿಕ್ಕೆ ಸಾಧ್ಯವಿಲ್ಲ. ಈಗಾಗಲೇ ರಾಜ್ಯ ಸರ್ಕಾರ ಈ ದಿಸೆಯಲ್ಲಿ ಏನೇನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದು ಅವರಿಗೂ ಗೊತ್ತಿರುವಂತಾದ್ದೇ ಆಗಿದೆ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ಬಗ್ಗೆ ದೆಹಲಿಗೆ ನಿಯೋಗವೊಂದನ್ನು ಕರೆದುಕೊಂಡು ಹೋಗಿ, ಆ ಸಂದರ್ಭದಲ್ಲಿ ಸಾಕಷ್ಟು ಒತ್ತಾಯವನ್ನೂ ಸಹ ಮಾಡಿದ್ದೇವೆ. ಆ ನಿಯೋಗದಲ್ಲಿ ಮಾನ್ಯ ಸದಸ್ಯರೂ ಇದ್ದರು. ಆದುದರಿಂದ ಈ ವಿಷಯದ ಬಗ್ಗೆ ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲ ಇದನ್ನು ಬೇರೆ ರೂಪದಲ್ಲಿ ತಂದರೆ ಚರ್ಚೆಗೆ ಅವಕಾಶ ಮಾಡಿ ಕೊಡಬಹುದು.

**ಅಧ್ಯಕ್ಷರು** : ಇದು ನಿಲುವಳಿ ಸೂಚನೆ ಅಡಿಯಲ್ಲಿ ಬರುವುದಿಲ್ಲವೆಂದು ನಾನು ಆಗಲೇ ಅವರಿಗೆ ಹೇಳಿದ್ದೇನೆ. ಈ ವಿಷಯವನ್ನು ನಿಯಮ 69 ಅಥವಾ ಇನ್ನಿತರ ಬೇರೆ ನಿಯಮದ ಅಡಿಯಲ್ಲಿ ತಂದರೆ, ನಾನು ಅದರ ಬಗ್ಗೆ ಚರ್ಚೆಗ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

**ಶ್ರೀ ವೈಜನಾಥ ಪಾಟೀಲ್** : ರಾಜ್ಯ ಸರ್ಕಾರದ stand ಈಗ ಬದಲಾಗಿದೆ.....

(ಗೊಂದಲ)

**9. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ವಿಷಯ : ಆಲಮಟ್ಟಿಯಲ್ಲಿ ಸಂಸದರ ನೇತೃತ್ವದಲ್ಲಿ ಧರಣಿ ನಡೆಯುತ್ತಿರುವ ಬಗ್ಗೆ.**

**ಅಧ್ಯಕ್ಷರು** : ಮಾನ್ಯ ಕಾರಜೋಳರವರೇ, ತಾವು ನೀರಾವರಿ ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ಅನುಮತಿ ನೀಡಬೇಕೆಂದು ಕೇಳುತ್ತಿದ್ದೀರಿ. ನಾಳೆ ಮಾನ್ಯ ನೀರಾವರಿ ಸಚಿವರು ಇರುತ್ತಾರೆ, ಅದನ್ನು ನಾಳೆ ಅರ್ಧ ಗಂಟೆ ಚರ್ಚಿಸಲು ಅವಕಾಶ ಕೊಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್** : ಅದರ ಬಗ್ಗೆ ಇವತ್ತು ಸ್ವಲ್ಪ ಪ್ರಸ್ತಾಪ ಮಾಡಿಬಿಡುತ್ತೇವೆ. 5–10 ನಿಮಿಷಗಳಲ್ಲಿ ಮುಗಿಸುತ್ತೇವೆ.

**ಅಧ್ಯಕ್ಷರು** : ಇದೊಂದು ವಿಷಯವಲ್ಲ. ಪ್ರಸ್ತಾಪಿಸಬೇಕಾದ ಇನ್ನೂ ಬೇರೆ ಬೇರೆ ಇಶ್ಯೂಗಳಿವೆ. ನಾಳೆ ಮಾನ್ಯ ಸಚಿವರು ಇರುತ್ತಾರೆ. ಆದ್ದರಿಂದ ನಾಳೆ ಪ್ರಸ್ತಾಪ ಮಾಡಿ. ಈಗ ಅವಕಾಶ ಕೊಡಲು ಆಗುವುದಿಲ್ಲ.

**ಶ್ರೀ ಜಗದೀಶ್ ಶೆಟ್ಟರ್** : ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಈಗಲೇ ಪ್ರಸ್ತಾಪ ಮಾಡಿಬಿಡುತ್ತೇವೆ. ಅಲ್ಲಿ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತಿದೆ.

**ಅಧ್ಯಕ್ಷರು** : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಾನು ಎಷ್ಟು ಹೇಳಿದರೂ ನೀವು ನನ್ನ ಮಾತುಗಳನ್ನು ಕೇಳದಿದ್ದರೆ ಹೇಗೆ? ನೀವು ಹೇಳಿದ ರೀತಿಯಲ್ಲೇ ಆಗಬೇಕೇನು? ಲಕ್ಷಾಂತರ ಜನರಿಗೆ ತೊಂದರೆಯಾಗತಕ್ಕ ಇನ್ನೂ ಪ್ರಸ್ತಾಪಿಸಬೇಕಾದ ಅನೇಕ ಸಮಸ್ಯೆಗಳಿವೆ. ನಾನು ಇದರ ಬಗ್ಗೆ ಚರ್ಚೆಗೆ

ಖಂಡಿತ ಅವಕಾಶ ಮಾಡಿಕೊಡುತ್ತೇನೆ. ನಾಳೆ ನೀರಾವರಿ ಸಚಿವರು ಇರುತ್ತಾರೆ. ಇದನ್ನು ನಾಳೆಗೆ ತೆಗೆದುಕೊಳ್ಳೋಣ.

**ಶ್ರೀ ಜಗದೀಶ್ ಶೆಟ್ಟರ್** : ಇವತ್ತು ಪ್ರಸ್ತಾಪಿಸಲು ಅವಕಾಶ ಕೊಡುವುದಾಗಿ ಬೆಳಿಗ್ಗೆ ಹೇಳಿದ್ದಿರಿ. ಕಳೆದ 3–4 ದಿವಸಗಳಿಂದ Everyday ಇದು ಹೀಗೇ ಮುಂದಕ್ಕೆ ಹೋಗುತ್ತಿದೆ. ಅಲ್ಲಿ ಸಂಸತ್ ಸದಸ್ಯರು ಮತ್ತು ಇನ್ನಿತರ ಮುಖಂಡರು ಅಮರಣಾಂತ ಉಪವಾಸ ಕುಳಿತಿದ್ದಾರೆ. ನಾಳೆ ಅವರ ಕಂಡೀಷನ್ ಬಹಳ ಗಂಭೀರವಾಗುತ್ತದೆ.

**ಅಧ್ಯಕ್ಷರು** : ಆಯಿತು, ಇದರ ಬಗ್ಗೆ ಮಧ್ಯಾಹ್ನ ತೆಗೆದುಕೊಳ್ಳೋಣ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್** : ಸನ್ಮಾನ್ಯ ಅಧ್ಯಕ್ಷರೇ 3–4 ದಿವಸಗಳಿಂದ ಇದನ್ನು ಪ್ರಸ್ತಾಪ ಮಾಡಲು ಪ್ರಯತ್ನಿಸುತ್ತಿದ್ದೇವೆ.....

**ಅಧ್ಯಕ್ಷರು** : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನೀವು ಏನು ಬೇಕಾದರೂ ಮಾತನಾಡಿಕೊಳ್ಳಬಹುದು. I have no objection.

**ಶ್ರೀ ಜಗದೀಶ್ ಶೆಟ್ಟರ್** : ದಯವಿಟ್ಟು ಮಾನ್ಯ ಅಧ್ಯಕ್ಷರು ಬೇಜಾರು ಮಾಡಿಕೊಳ್ಳಬಾರದು. ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ದಿವಸಗಳಿಂದ ಇದನ್ನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಬೆಳಿಗ್ಗೆ ತಾವು ಅನುಮತಿ ಕೊಡುತ್ತೇನೆಂದು ಹೇಳಿದ್ದಿರಿ.

**ಶ್ರೀ ಗೋವಿಂದ ಎಂ. ಕಾರಜೋಳ** : ಪ್ರಶ್ನೋತ್ತರ ಮುಗಿದ ನಂತರ ನಾನು ಇದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆಂದು ತಾವು ಹೇಳಿದ್ದಕ್ಕಾಗಿ ನಾವು ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ದಯವಿಟ್ಟು ಮಾನ್ಯ ಅಧ್ಯಕ್ಷರು ಬೇಜಾರು ಮಾಡಿಕೊಳ್ಳಬಾರದು.

**ಅಧ್ಯಕ್ಷರು** : ಕಾರಜೋಳರವರೇ, ನಾನು ತಾವು ನನ್ನ ಛೇಂಬರ್ಸ್‌ನಲ್ಲಿ ಬಂದಾಗ ಸಹ ಇದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೆ. ದಯಮಾಡಿ ಕೇಳಿ. ನಾಳೆ ಮಾನ್ಯ ನೀರಾವರಿ ಸಚಿವರು ಇರುತ್ತಾರೆ. ಆದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳೋಣ. ನಿಯಮ 69ರ ಕೆಳಗೆ ಒಂದನ್ನು ಕಳುಹಿಸಿದ್ದೀರಿ. ಇವತ್ತು ಕುಡಿಯುವ ನೀರಿನ ವಿಚಾರದ ಬಗ್ಗೆ ಸರ್ಕಾರದಿಂದ ಉತ್ತರ ಕೊಡಬೇಕಾಗಿದೆ.

**ಶ್ರೀ ಜಗದೀಶ್ ಶೆಟ್ಟರ್** : 5–10 ನಿಮಿಷಗಳಲ್ಲಿ ಇದು ಮುಗಿಯುತ್ತದೆ. ದಯವಿಟ್ಟು ಅವಕಾಶ ಮಾಡಿಕೊಡಿ.

**ಅಧ್ಯಕ್ಷರು** : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ಕುಳಿತುಕೊಳ್ಳಿ. 5 ನಿಮಿಷಗಳಲ್ಲಿ ಯಾವುದು ಮುಗಿಯುತ್ತದೆ ಎಂಬುದು ನನಗೆ ಗೊತ್ತಿದೆ. ಆದ್ದರಿಂದ ನಾಳೆ ನಾನು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್** : ಅಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಅಲ್ಲಿ ಅಮರಣಾಂತ ಉಪವಾಸ ಕುಳಿತಿದ್ದಾರೆ. ಧರಣಿ ಸತ್ಯಾಗ್ರಹ ಮತ್ತು ಹೋರಾಟ ನಡೆಯುತ್ತಿದೆ.

**ಅಧ್ಯಕ್ಷರು** : ಆಯಿತು ನೋಡೋಣ. ಅದರ ಬಗ್ಗೆ ಇವತ್ತು ಮಧ್ಯಾಹ್ನ ತೆಗೆದುಕೊಳ್ಳೋಣ ಬಿಡಿ. ಈಗ ಶಾಸನ ರಚನೆ.

(ಗೊಂದಲ)

**ಅಧ್ಯಕ್ಷರು** : ಇವತ್ತು ಶೂನ್ಯ ವೇಳೆ ಇಲ್ಲ. ನಾಳೆ ಏನು ಬೇಕಾದರೂ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

**ಆ) ವಿಷಯ : ಟೈಲರ್ಸ್‌ಗಳ ಬೇಡಿಕೆ ಬಗ್ಗೆ**

**ಶ್ರೀ ಅರಗ ಜ್ಞಾನೇಂದ್ರ** : ..... ಹೊಲಿಗೆ ಹಾಕುವ ಟೈಲರ್ಸ್ .....

**ಅಧ್ಯಕ್ಷರು** : ಇದೇ ವಿಚಾರವನ್ನು ಆಗಲೇ ನಿಮ್ಮ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಆ ಬಗ್ಗೆ ಆಗಲೇ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಹೀಗಿರುವಾಗ ನೀವು ಮತ್ತೊಮ್ಮೆ ಅದೇ ವಿಚಾರವನ್ನು ಪ್ರಸ್ತಾಪ ಮಾಡಲು ಹೊರಟರೆ ಹೇಗೆ? ಅನವಶ್ಯಕವಾಗಿ ಚರ್ಚೆ ಮಾಡಿ ಸಭೆಯ ಸಮಯವನ್ನು ಹಾಳು ಮಾಡಬೇಡಿ.

**ಶ್ರೀ ಅರಗ ಜ್ಞಾನೇಂದ್ರ** : ಟೈಲರ್‌ಗಳು ಒಂದು ಲಕ್ಷ ಜನ ಇವತ್ತು ಬಂದಿದ್ದಾರೆ. ಅವರು ಕೆಲವೊಂದು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವುಗಳ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ಅವುಗಳನ್ನು ಈಡೇರಿಸುವುದಾಗಿ ಸರ್ಕಾರ ಘೋಷಣೆ ಮಾಡಬೇಕು. ಇಡೀ ರಾಜ್ಯದ ಮೂಲೆ ಮೂಲೆಗಳಿಂದ ಇವತ್ತು ಟೈಲರ್ಸ್ ಬೆಂಗಳೂರಿಗೆ ಬಂದಿದ್ದಾರೆ.

**ಅಧ್ಯಕ್ಷರು** : ಆಯಿತು, ನಿಮ್ಮ ನಾಯಕರು ಈ ವಿಚಾರವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** : ಮಾನ್ಯ ಶ್ರೀರಾಮರೆಡ್ಡಿಯವರೂ ಸಹ ಈಗ ನನ್ನ ಜೊತೆಗೆ ಅದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಮಾನ್ಯ ಸದಸ್ಯರಾದ ಸೀತಾರಾಮ್‌ರವರೂ ಕೂಡ ಅದರ ಬಗ್ಗೆ ನನಗೆ ಹೇಳಿದ್ದಾರೆ. ಕಾರ್ಮಿಕ ಸಚಿವರಾದ ತನ್ವೀರ್ ಸೇಠ್‌ರನ್ನೂ ಸಹ ಈಗ ಅಲ್ಲಿಗೆ ನಾನು ಕಳುಹಿಸುತ್ತಿದ್ದೇನೆ. 4–5 ಜನ ಭೇಟಿಯಾಗಬೇಕೆಂದಿದ್ದರೆ, ಸಂಜೆ 5 ಗಂಟೆಯ ನಂತರ ನನ್ನ ಛೇಂಬರಿಗೆ ಬರಬಹುದು. ಆಗ ನಾನು ಅವರನ್ನು ಭೇಟಿ ಮಾಡುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಹೊಲಿಗೆದಾರರ ಮೇಲೆ ಸಿಟ್ಟು ಮಾಡಿಕೊಳ್ಳಬಾರದು. ಅವರು ನಮ್ಮ ಬಟ್ಟೆನೆಲ್ಲಾ ಹೇಗೇಗೋ ಹೊಲೆಯಬಹುದು. ಹಾಗಾಗಿ ಅವರ ಬೇಡಿಕೆಗಳ ಬಗ್ಗೆ ಸರ್ಕಾರ ಸೌಜನ್ಯ ಪೂರ್ಣವಾಗಿ ಅವರನ್ನು ಕರೆಸಿ ಮಾತನಾಡಬೇಕು. ನಮ್ಮ ಬಟ್ಟೆಗಳನ್ನು ಹೊಲಿಯುವವರು ಅವರೇ. ಅವರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಅವರು ನಮ್ಮ ಬಟ್ಟೆಗಳನ್ನು ಹೇಗೇಗೋ ಹೊಲಿದರೆ ನಮ್ಮ ಕಥೆ ಏನಾಗಬಹುದು?

**ಅಧ್ಯಕ್ಷರು** : ಈಗಾಗಲೇ ಅದರ ಬಗ್ಗೆ ಹೇಳಿಯಾಗಿದೆ. ಮತ್ತೆ ಅದರ ಬಗ್ಗೆ ಏಕೆ ಪ್ರಸ್ತಾಪ ಮಾಡುತ್ತೀರಿ?

**ಶ್ರೀ ಧರ್ಮಸಿಂಗ್** : ಅವರ ಬೇಡಿಕೆಗಳ ಪತ್ರವನ್ನು ತೆಗೆದುಕೊಂಡು, ಇದರ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸುತ್ತೇನೆ. ಅದರ ಬಗ್ಗೆ ಸಮಂಜಸವಾಗಿ ಚರ್ಚೆಯಾಗುತ್ತದೆ. ಈ ಬಗ್ಗೆ ಮತ್ತೊಂದು ದಿನಾಂಕವೊಂದನ್ನು ನಿಗದಿಪಡಿಸಿ, ಅವರ ಕೆಲವು ಪ್ರತಿನಿಧಿಗಳೊಂದಿಗೆ ತಮ್ಮ ಜೊತೆಗೆ ಕೂಡ ಮಾತನಾಡುತ್ತೇನೆ.